

# ಆಭರಣಗಳಲ್ಲಿ ಮೋಹಕ ಮೋಟಿಫ್

■ ರೂಪಾ

ಫ್ಯಾಷನ್ ಲೋಕದಲ್ಲಿ ಆಧುನಿಕತೆಯನ್ನು ಎಷ್ಟೇ ಆವಾಹಿಸಿಕೊಂಡರೂ, ಪ್ರಕೃತಿಯ ಚುಂಗು ಹಿಡಿದೇ ಹೊಸ ಹೆಜ್ಜೆ ಇಡಬೇಕು ಎಂಬುದಂತೂ ದಿಟ. ನೀಲಿ ಆಗಸದಲ್ಲಿ ಚದುರಿದಂತೆ ಕಾಣುವ ಶುಭ್ರ ಮೇಘಗಳು, ಬಿದಿಗೆ ಚಂದ್ರಮ, ನಸುಕಿನಲ್ಲಿ ಹೊಳೆಯುವ ನಕ್ಷತ್ರ, ಎಲೆ, ಬೆಟ್ಟಗಳು, ಹೂವು, ಜಲಪಾತ ಹೀಗೆ ಪ್ರಕೃತಿಯ ಲಾಸ್ಯಗಳೆಲ್ಲವೂ ಆಭರಣಗಳಲ್ಲಿ ಆಲಂಕಾರಿಕ ಚಿತ್ರಗಳಾಗಿ ಮೋಡಿ ಮಾಡುತ್ತಲೇ ಇವೆ.

ಪ್ರಕೃತಿಯೊಳಗೆ ಅಡಗಿರುವ ಪ್ರಾಣಿ, ಪಕ್ಷಿ, ಕೀಟಗಳೆಲ್ಲವೂ ಒನಪಿನ ಭಾಗವಾಗುವ ಬಗೆಯೇ ಹೊಸದೊಂದು ಫ್ಯಾಷನ್ನಿನ ಸ್ಟೇಟ್‌ಮೆಂಟ್. ಹೀಗೊಂದು ಸ್ಟೇಟ್‌ಮೆಂಟ್ ರೂಪುಗೊಂಡು ಹಲವು ದಶಕಗಳೇ ಕಳೆದಿವೆ. ಫ್ಯಾಷನ್‌ಗೊಂದು ಉದ್ದೇಶ ಕೊಡುವುದರ ಜತೆಗೆ ಅಪಾರ ಅರ್ಥವನ್ನು ಧ್ವನಿಸುವ ಈ ಆಲಂಕಾರಿಕ ಚಿತ್ರಗಳು ತೊಡುವವರ ಆಸ್ಥೆಯನ್ನು ಮುಚ್ಚುಮರೆಯಿಲ್ಲದೇ ಬಿಚ್ಚಿಡುತ್ತವೆ.

ನಾಗರಿಕತೆ ಆರಂಭವಾದಾಗಿನಿಂದಲೂ ಸಮಕಾಲೀನ ವಿನ್ಯಾಸಗಳವರೆಗೂ ನಾನಾ ಪ್ರಾಣಿಗಳು, ಪಕ್ಷಿಗಳು, ಕೀಟಗಳ ರಚನೆಗಳು ಅಮೂಲ್ಯ ಲೋಹ ಹಾಗೂ ದುಬಾರಿ ಬೆಲೆಬಾಳುವ ಕಲ್ಲುಗಳಲ್ಲಿ ಮೂಡಿವೆ. ಇವು ಸಕಾರಾತ್ಮಕ ಶಕ್ತಿಯ ಸಂಕೇತಗಳಾಗಿಯೂ ಸೆಳೆಯುತ್ತವೆ. ಪ್ರಾಣಿಗಳ ಮೋಟಿಫ್‌ಗಳಿರುವ ಸರಗಳು, ಬಳೆಗಳು, ಕಿವಿಯೋಲೆಗಳು, ಉಂಗುರಗಳಿಗೆ ಉತ್ತಮ ಬೇಡಿಕೆ ಇದೆ. ಸುಂದರ ಹಾಗೂ ಅಷ್ಟೇ ಅರ್ಥಗರ್ಭಿತವಾದ ಕೆಲವೊಂದು ಮೋಟಿಫ್‌ಗಳು ಹೀಗಿವೆ. ಆಭರಣಗಳನ್ನು ಆಯ್ಕೆ ಮಾಡುವಾಗ ಈ ಮೋಟಿಫ್‌ಗಳ ಅರ್ಥ ತಿಳಿದಿದ್ದರೆ, ಅದನ್ನು ಧರಿಸಿದಾಗ ದೊರೆಯುವ ಆತ್ಮವಿಶ್ವಾಸವೇ ಬೇರೆ.

**ಉಗ್ರ ಸಿಂಹ:** ಸಿಂಹದ ಮೋಟಿಫ್‌ಗಳು ಮೊದಲಿನಿಂದಲೂ ಶಕ್ತಿ, ಧೈರ್ಯ ಹಾಗೂ ರಾಜಗಾಂಭೀರ್ಯದ ಪ್ರತಿನಿಧಿ. ಈಜಿಪ್ಟ್ ಮತ್ತು ಮೆಸಪಟೋಮಿಯಾದ ಆಭರಣಗಳಲ್ಲಿ ಸಿಂಹಗಳನ್ನು ರಕ್ಷಕರಂತೆ ಚಿತ್ರಿಸಲಾಗಿದೆ. ಆಡಳಿತ ವಿಭಾಗದಲ್ಲಿ ಇರುವವರು, ಯೋಧರು, ಶಕ್ತಿಶಾಲಿ ಗುಣಗಳ ಆರಾಧಕರಿಗೆ ಈ ಮೋಟಿಫ್ ಅಚ್ಚುಮೆಚ್ಚು.

**ಕುದುರೆ:** ಕುದುರೆಯೆಂದರೆ ಸ್ವಾತಂತ್ರ್ಯ, ಉದಾತ್ತತೆಯ ಪ್ರತೀಕ. ಅಲ್ಲದೆ ಶಕ್ತಿ ಮತ್ತು ಸಹಿಷ್ಣುತೆಯ ಸಂಕೇತ. ಸಾಹಸಿ ಪ್ರವೃತ್ತಿಯವರಾದರೆ ಕುದುರೆ ಮೋಟಿಫ್‌ಗಳಿರುವ ಸರಗಳನ್ನು ಧರಿಸಲು ಇಚ್ಛಿಸುತ್ತಾರೆ. ಕುದುರೆಯ ಮೋಟಿಫ್‌ಗಳಿರುವ ಕಿವಿಯೋಲೆಗಳಿಗೆ ಒಳ್ಳೆಯ ಬೇಡಿಕೆ ಇದೆ.

**ನೀರಾನೆ, ಆನೆಗಳು:** ಈಜಿಪ್ಟ್ ಸಂಸ್ಕೃತಿಯಲ್ಲಿ ನೀರಾನೆಯನ್ನು ಶಕ್ತಿ ಹಾಗೂ ನೀರಿನ ಮಹತ್ವಕ್ಕಾಗಿ ಪೂಜಿಸಲಾಗುತ್ತಿತ್ತು. ಅಷ್ಟೇ ಅಲ್ಲದೆ ಇವು ಫಲವತ್ತತೆ ಮತ್ತು ತಾಯ್ತನದ ಪ್ರತಿನಿಧಿಗಳಾಗಿಯೂ ನೋಡಲಾಗುತ್ತದೆ. ಬುದ್ಧಿವಂತಿಕೆ ಮತ್ತು ಶಕ್ತಿಶಾಲಿಗೆ ಹೆಸರಾದ ಆನೆಗಳು, ಮುದ್ದು ಮುದ್ದಾಗಿ ಕಾಣುವ ಆನೆಮರಿಗಳನ್ನು ಆಲಂಕಾರಿಕ ಚಿತ್ರಗಳಲ್ಲಿ ಕಾಣಬಹುದು.

**ಹದ್ದುಗಳು:** ಪ್ರಾಣಿಗಳಷ್ಟೇ ಅಲ್ಲದೆ ಪಕ್ಷಿಗಳ ಮೋಟಿಫ್‌ಗಳು ಹೆಸರುವಾಸಿಯಾಗಿದೆ. ಅನೇಕ ಸಂಸ್ಕೃತಿಗಳಲ್ಲಿ ಹದ್ದು ಶಕ್ತಿ ಮತ್ತು ರಕ್ಷಣೆಯ ಸೂಚಕ. ಪ್ರಾಚೀನ ರೋಮನ್ನರು ಹದ್ದನ್ನು ಸೇನಾ ಪರಾಕ್ರಮದ ಸಂಕೇತವಾಗಿ ಪೂಜಿಸಿದರೆ, ಅಮೆರಿಕದ ಬುಡಕಟ್ಟು ಜನಾಂಗದವರು ಮನುಷ್ಯ ಮತ್ತು ದೈವಿಕ ಶಕ್ತಿಗಳ ನಡುವಿನ ಸಂದೇಶವಾಹಕವೆಂದು ಪೂಜಿಸುತ್ತಾರೆ. ಆಭರಣಗಳಲ್ಲಿ ಹದ್ದುಗಳ ಮೋಟಿಫ್‌ಗಳು ಶಕ್ತಿ, ದೃಷ್ಟಿ ಹಾಗೂ ಆಧ್ಯಾತ್ಮಿಕ ಶಕ್ತಿಯ ಪ್ರತಿಬಿಂಬ.

**ಗೂಬೆಗಳು:** ಗೂಬೆಗಳು ಬಹಳ ಹಿಂದಿನಿಂದಲೂ ಬುದ್ಧಿವಂತಿಕೆ ಮತ್ತು ಜ್ಞಾನಕ್ಕೆ ಹೆಸರುವಾಸಿ. ಪ್ರಾಚೀನ ಗ್ರೀಕ್‌ನಲ್ಲಿ, ಗೂಬೆಯು ಬುದ್ಧಿಯ ಅಧಿದೇವತೆಯಾದ ಅಥೇನಾ ಜೊತೆ ನಿಕಟ ಸಂಬಂಧ ಹೊಂದಿತ್ತು. ಆಧುನಿಕ ಗೂಬೆ ಆಭರಣಗಳು ಹೆಚ್ಚಾಗಿ ಬೌದ್ಧಿಕ ಕುತೂಹಲ, ಒಳನೋಟ ಮತ್ತು ಜೀವನದ ರಹಸ್ಯಗಳನ್ನು ಪ್ರತಿಬಿಂಬಿಸುತ್ತವೆ. ಮುದ್ದಾದ ಮುಖಭಾವವಿರುವ ಗೂಬೆಗಳನ್ನು ಕತ್ತು ಹಾಗೂ ಕೈಗೆ ಧರಿಸುವ ಆಭರಣಗಳಲ್ಲಿ ಹೆಚ್ಚಾಗಿ ನೋಡಬಹುದು.

**ಚಿಟ್ಟೆಗಳು, ಜೇನುನೊಣ:** ರೂಪಾಂತರದ ರೂಪಕವೇ ಚಿಟ್ಟೆಗಳು. ಮರಿಹುಳುಗಳಿಂದ ಚಿಟ್ಟೆಗಳಾಗಿ ರೂಪಾಂತರಗೊಳ್ಳುವ ಬಗೆಯನ್ನು ವೈಯಕ್ತಿಕ ಬೆಳವಣಿಗೆ, ಆಧ್ಯಾತ್ಮಿಕ ವಿಕಾಸವೆಂದೇ ನೋಡಲಾಗುತ್ತದೆ. ರಾಣಿ ವಿಕ್ಟೋರಿಯಾ ಧರಿಸಿದ ಆಭರಣಗಳಲ್ಲಿ, ಚಿಟ್ಟೆಯ ವಿನ್ಯಾಸಗಳು ಜನಪ್ರಿಯವಾಗಿದ್ದವು. ಜೇನುನೊಣಗಳು ಉತ್ಪಾದಕತೆ ಮತ್ತು ಸಂಪತ್ತನ್ನು ಪ್ರತಿನಿಧಿಸುತ್ತದೆ. ಜೇನುನೊಣ ವಿನ್ಯಾಸವಿರುವ ಆಭರಣಗಳನ್ನು ಧರಿಸುವುದರಿಂದ ಕಠಿಣ ಪರಿಶ್ರಮ, ಏಕತೆ ಮತ್ತು ಸಮೃದ್ಧಿ ಹೆಚ್ಚುತ್ತದೆ ಎಂಬ ನಂಬಿಕೆಯೂ ಇದೆ. ಮೊಸಳೆಗಳು, ಮೊಲ, ಆಮೆಗಳು ಸೇರಿದಂತೆ ಪ್ರಕೃತಿಯಲ್ಲಿರುವ ಹಲವು ಜೀವಿಗಳಲ್ಲಿ ವ್ಯಗ್ರತೆಯನ್ನು ಬದಿಗಿಟ್ಟು, ಸಕಾರಾತ್ಮಕ ಅಂಶವನ್ನಷ್ಟೇ ತೆಗೆದುಕೊಂಡು, ಅದರ ಪ್ರತಿನಿಧಿಯಾಗಿ ಮೋಟಿಫ್ ವಿನ್ಯಾಸ ಮಾಡಲಾಗುತ್ತದೆ.

ಕೊನೆಗೂ ಫ್ಯಾಷನ್ ಎಂದರೇನು? ಎಂದು ಕೇಳಿಕೊಂಡರೆ, ಅದು ನಮ್ಮೊಳಗಿನ ಅಳುಕುಗಳನ್ನು, ಹಿಂಜರಿಕೆಗಳನ್ನು ಮೆಲ್ಲಗೆ ತಿದ್ದಿ, ತೀಡಿ, ಆಂತರ್ಯದ ಹೊಳಪನ್ನು ಹೆಚ್ಚಿಸುತ್ತ ಉಳಿಯಬಹುದಾದ ಸಕಾರಾತ್ಮಕ ಶಕ್ತಿಯೇ ಅಲ್ಲವೇ? ■